ಒಬ್ಬನ ಕೈ ಅವಳ ವೇಲ್ ಸೆಳೆದಿತ್ತು. ಮತ್ತೊಬ್ಬನದು ಕೂದಲು ಎಳೆದಿತ್ತು. ಮಗದೊಂದು ಕೈ ಅವಳ ಮೈಮೇಲೆ ಹಾವು ಹರಿದಂತೆ... ಕಿಟಾರನೆ ಕಿರುಚಿಕೊಂಡಿದ್ದಳವಳು. ಅವನು ಸ್ತಬ್ಧನಾಗಿಬಿಟ್ಟಿದ್ದ!

ಅವರಿಬ್ಬರ ಪುಣ್ಯ! ಎದುರಿನಿಂದ ಓರ್ವ ಅಪರಿಚಿತ ವ್ಯಕ್ತಿಯ ಆಗಮನವಾಗಿತ್ತು. ಅಕ್ಕಪಕ್ಕಗಳಲ್ಲಿದ್ದ ಯಾವುದೋ ಊರಿನವನಿರಬಹುದು. ಅವನನ್ನು ಕಂಡು ಹುಡುಗರು ಕ್ಷಣ ನಿಷ್ಕ್ರಿಯರಾಗಿದ್ದರು. ಹುಡುಗರ ನಡೆ ಖಂಡಿಸಿ ಆತ ನಾಲ್ಕು ಮಾತನಾಡಿದ್ದನಷ್ಟೆ! ಅವರೆಲ್ಲರ ರಾಕ್ಷಸತನ ಅವನನ್ನು ಆವರಿಸಿಬಿಟ್ಟಿತ್ತು. ಇವನು ಹೆಂಡತಿಯನ್ನೆಳೆದುಕೊಂಡು ಓಡತೊಡಗಿದ್ದ. ''ಪಾ... ಪ... ಅವರು... ಅವರು...'' ಆರ್ತನಾದ ಹೊರಡಿಸುತ್ತಾ ಹಿಂತಿರುಗಿ ನೋಡಿದ್ದಳು. ಅವರೆಲ್ಲ ಕೆಳಗೆ ಬಿದ್ದಿದ್ದ ಅವನನ್ನು ಕಾಲುಗಳಿಂದ ತಕಪಕ ತುಳಿಯುತ್ತಿದ್ದಾರೆ. ಆ... ಆತ ಬದುಕುಳಿದಿರಲು ಸಾಧ್ಯವೇ ಇಲ್ಲ. ಅವಳು ಕಲ್ಲಾಗಿಬಿಟ್ಟಿದ್ದಳು.

ರೂಮಿಗೆ ಬಂದಿದ್ದ ಅವನು ಸರಸರನೆ ಕೈಗೆ ಸಿಕ್ಕಿದ್ದನ್ನು ಬ್ಯಾಗಿಗೆ ತುಂಬಿಕೊಳ್ಳಲಾರಂಭಿಸಿದ್ದ. ''ರೆಸಾರ್ಟಿನ ಮ್ಯಾನೇಜರ್‌ಗೆ ಹೇಳುವಾ. ಸೆಕ್ಯುರಿಟಿ ಗಾರ್ಡ್ಸ್ ಕರೆದೊಯ್ಯುವಾ. ಹತ್ತಿರದ ಪೊಲೀಸ್ ಠಾಣೆಗೆ ಕಂಪ್ಲೇಂಟ್ ಕೊಡುವಾ...'' ಅವಳು ಹತ್ತಾರು ಸಾಧ್ಯತೆಗಳನ್ನು ಅರುಹುತ್ತಲೇ ಹೋಗಿದ್ದಳು. ''ಶಟ್ ಅಪ್'' ಅವಳನ್ನು ಒರಟಾಗಿ ದೂಡಿದ್ದ. ''ತಲೆಗಿಲೆ ಕೆಟ್ಟಿದ್ಯಾ, ಸ್ಟೇಷನ್ನಂತೆ... ಕೋರ್ಟ್, ಕಚೇರಿ, ವಿಚಾರಣೆ, ಟೀವಿ ನ್ಯೂಸ್... ತಮ್ಮಟೆ ತಗಂಡು ಸಾರ್ಕೊಂಡು ಬರ್ರೋಣ್ವಾ?'' ಅವರು ರೂಮನ್ನು ಚೆಕ್‌ಔಟ್ ಮಾಡಿ ರಾತ್ರಿಯೇ ಹಿಂತಿರುಗಿ ಬಿಟ್ಟಿದ್ದರು.

★★★

ಅವಳೀಗ ಮೌನಿ! ತನ್ನ ಮೇಲಾಗಿದ್ದ ಆ ಹುಡುಗರ ಆಕ್ರಮಣ... ಅವಳನ್ನು ನಡುಗಿಸಿದ್ದು ನಿಜ. ಆದರೆ ಅದನ್ನೂ ಮೀರಿ ಅವಳನ್ನು ಕಾಡುತ್ತಿದ್ದದ್ದು ಆ ಅಪರಿಚಿತ ವ್ಯಕ್ತಿ! ಗುರುತು, ಪರಿಚಯವಿರದಿದ್ದ, ಹಾದಿಯಲ್ಲಿ ಕಂಡ ಯಾರೊ ಇಬ್ಬರ ಪರವಾಗಿ ಆತ ಮಾತನಾಡಿದ್ದು... ಅದೇ ಕಾರಣವಾಗಿ ಆ ರಾಕ್ಷಸರ ಕಾಲುಗಳ ತುಳಿತಕ್ಕೆ ಒಳಗಾಗಿದ್ದು... ನೆಲದಲ್ಲಿ ಬಿದ್ದು ಹೊರಳಾಡುತ್ತಿದ್ದ ಆ ಅವನು! ಅವನನ್ನು ತುಳಿಯುತ್ತಿದ್ದ ಆ ರಾಕ್ಷಸರ ಬೂಟುಗಾಲುಗಳಿಗಿಂತ, ಅಲ್ಲಿಂದ ಓಡಿ ಬಂದು ಬಿಟ್ಟ ತನ್ನ ಮತ್ತು ತನ್ನ ಗಂಡನ ಕಾಲುಗಳ ಕ್ರೌರ್ಯ ಅತಿ ಎನ್ನಿಸತೊಡಗಿತ್ತು.

ಅವಳೂ ತಿಳಿವಳಿಕಸ್ಥಳೇ! ಮಧ್ಯಮವರ್ಗದ ಜೀವನ ಸಂಗ್ರಾಮದಲ್ಲಿ ಬೆಂದು ಹದಗೊಂಡವಳೇ! ತನ್ನ ಗಂಡ ಸಿನಿಮಾದ ಹೀರೋನಂತೆ ಅವರೆಲ್ಲರನ್ನು ತದುಕಿ ಬರಬೇಕಿತ್ತು ಎಂಬ ನಿರೀಕ್ಷೆಯೇನೂ ಅವಳಲ್ಲಿರಲಿಲ್ಲ. ಆದರೆ... ಮನುಷ್ಯತ್ವವೇ ಬಹಳ ದೊಡ್ಡ ಹೀರೋತನವಲ್ಲವೆ? ಹುಚ್ಚು ಹಿಡಿದಿದ್ದ ಕುದುರೆಗಳಂತಿದ್ದವರ ಬಳಿ... ಓಡಿಬಿಡುವ ತೀರ್ಮಾನ ಅವಳಿಗೂ ಒಪ್ಪಿತವೇ ಆಗಿತ್ತು. ಆದರೆ ಅಪರಿಚಿತ ವ್ಯಕ್ತಿಯ ಆಗಮನ ಎಲ್ಲವನ್ನೂ ತಲೆಕೆಳಗು ಮಾಡಿಬಿಟ್ಟಿತ್ತು. ತಮಗಾಗಿ ನಿಂತವನನ್ನು ಉಳಿಸಿಕೊಳ್ಳಲು ಎಷ್ಟೊಂದು ದಾರಿಗಳಿದ್ದವು, ತಮಗೆ! ಆದರೆ ಗಂಡ ತಮ್ಮನ್ನು ಮಾತ್ರ 'ಉಳಿಸಿಕೊಳ್ಳುವ' ಪ್ರಯತ್ನದಲ್ಲಿ ನಿರತನಾಗಿಬಿಟ್ಟ. ಮನುಷ್ಯತ್ವ ಮರೆತುಬಿಟ್ಟ... ಎಷ್ಟು ಸಣ್ಣವನಾಗಿಬಿಟ್ಟ... ಅವನ ಮಾನ, ಮರ್ಯಾದೆ... ನಾಗರಿಕ ಬದುಕು... ಸಂಗತ ಜೀವನ... ಇವಿಷ್ಟೇ ಅವನಿಗೆ ಮುಖ್ಯವಾಗಿಬಿಟ್ಟಿತ್ತಲ್ಲ... ಆ ಅಪರಿಚಿತನ ಪ್ರಾಣ ಅವನಿಗೆ ಏನೇನೂ ಬೆಲೆಯುಳ್ಳದ್ದಾಗಿ ಕಾಣಲೇ ಇಲ್ಲವಲ್ಲ... ಆದರೆ ಆತ ತಮ್ಮ ಪರವಾಗಿ ನಿಂತದ್ದು ಮನುಷ್ಯತ್ವದಿಂದ... ನಾಲ್ಕು ಮಾತನಾಡಿದ್ದು.... ಮಾನವೀಯತೆಯಿಂದ! ನಾವೂ ಅವನಿಗೆ ಅಪರಿಚಿತರೇ ಆಗಿದ್ದವರಲ್ಲವೇ?!

★★★

ಅಪರಿಚಿತ ವ್ಯಕ್ತಿಗಾಗಿ ಅವಳು ತಹತಹಿಸತೊಡಗಿದ್ದಳು. ಯಾವ ತಾಯಿ ಹೆತ್ತ ಮಗನೊ? ಯಾವ ಅಕ್ಕತಂಗಿಯರಿಗೆ ಅಣ್ಣತಮ್ಮನೋ? ಯಾವ ಮಡದಿಯ ಗಂಡನೋ? ಅಂದು... ಅದೊಂದು...